# ಭ್ರೂಣದ ಲಿಂಗ ನಿರ್ಧಾರ

## [ تحديد جنس الجنين ]

[**Kannada –** ಕನ್ನಡ –كنادي ]


**ಮುಹಮ್ಮದ್ ಹಂಝಾ ಪುತ್ತೂರು**

**محمد حمزة بتوري**



IslamHouse.com

1435 – 2014

بِسْمِ اللهِ الرَّحْمَـنِ الرَّحِيم

ಭ್ರೂಣಶಾಸ್ತ್ರ (Embryology)ದ ಕುರಿತು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿರುವ ಅನೇಕ ವಿಸ್ಮಯಕಾರಿ ಉಲ್ಲೇಖಗಳನ್ನು ಆಧುನಿಕ ವೈಜ್ಞಾನಿಕ ಜಗತ್ತು ಈಗಾಗಲೇ ಅಂಗೀಕರಿಸಿದೆ.

ಕೇವಲ ಅತಿಸೂಕ್ಷ್ಮ ಸೂಕ್ಷ್ಮದರ್ಶಕಗಳಿಂದ (Electronic Microscope) ಮಾತ್ರ ವೀಕ್ಷಿಸಬಹುದಾದ ಭ್ರೂಣ ಬೆಳವಣಿಗೆಯ ಆರಂಭಿಕ ಹಂತಗಳ ಕುರಿತು ಕುರ್‌ಆನ್‌ನಲ್ಲಿರುವ ಮಾಹಿತಿಗಳು ಅತಿ ನಿಖರವೂ ಪ್ರಮಾದಮುಕ್ತವೂ ಆಗಿವೆಯೆಂದು ಪ್ರಸಿದ್ಧ ಭ್ರೂಣ ಶಾಸ್ತ್ರಜ್ಞರು ದೃಢೀಕರಿಸಿದ್ದಾರೆ.
ಭ್ರೂಣ ಬೆಳವಣಿಗೆಗಳ ವಿವಿಧ ಹಂತಗಳ ಕುರಿತು ಆಳವಾಗಿ ಸಂಶೋಧನೆ ಮಾಡುತ್ತಾ ಹೋದರೆ ಅವುಗಳ ಕುರಿತು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿರುವ ಉಲ್ಲೇಖಗಳು ಇನ್ನಷ್ಟು ಕರಾರುವಾಕ್ಕಾಗಿ ತಾಳೆ ಹೊಂದುವುದನ್ನು ಕಾಣಬಹುದಾಗಿದೆ.

ಭ್ರೂಣ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಲಿಂಗ ನಿರ್ಧಾರದ ಹಂತವು (Stage of Sex Determination) ಅತಿ ಪ್ರಮುಖವೂ ವಿಸ್ಮಯಕರವೂ ಆಗಿದೆ.
ಸಾಮಾನ್ಯವಾಗಿ ಗರ್ಭಾಶಯದೊಳಗೆ ರೂಪುಗೊಳ್ಳುವ ಭ್ರೂಣ ಗಂಡೋ ಅಥವಾ ಹೆಣ್ಣೋ ಎಂದು ನಿರ್ಧಾರವಾಗುವುದು ಗರ್ಭಧಾರಣೆ (Conception) ನಡೆಯುವ ಸಂದರ್ಭದಲ್ಲಾಗಿದೆ.

ಅಂಡಕೋಶವನ್ನು ಫಲಿತಗೊಳಿಸುವ ವೀರ್ಯಕೋಶವು ವೈ ವರ್ಣತಂತು (Y Chromosome)ವನ್ನು ಹೊಂದಿದ್ದಲ್ಲಿ ಶಿಶುವು ಗಂಡಾಗುವುದು. ಎಕ್ಸ್ ವರ್ಣತಂತು (X Chromosome)ವನ್ನು ಹೊಂದಿದ ವೀರ್ಯಕೋಶವು ಅಂಡಕೋಶವನ್ನು ಫಲಿತಗೊಳಿಸಿದಲ್ಲಿ ಶಿಶುವು ಹೆಣ್ಣಾಗಿರುವುದು.


﴿وَأَنَّهُ خَلَقَ الزَّوْجَيْنِ الذَّكَرَ وَالْأُنْثَى * مِنْ نُطْفَةٍ إِذَا تُمْنَى﴾

**“ಅವನು ಗಂಡು–ಹೆಣ್ಣುಗಳೆಂಬ ಜೋಡಿಗಳನ್ನು ಸೃಷ್ಟಿಸುವನು, ನುತ್ಫದಿಂದ; ಅದು ಚಿಮ್ಮಿದಾಗ” (ಕುರ್‌ಆನ್ 53/45–46)**

ಇನ್ನು ಲಿಂಗ ನಿರ್ಧಾರದ ಕುರಿತು ಪ್ರವಾದಿ(ﷺ)ರವರ ವಚನಗಳಲ್ಲಿ ಇನ್ನಷ್ಟು ವಿವರಣೆಗಳು ಕಂಡು ಬರುತ್ತವೆ. ಇದರಲ್ಲಿರುವ ವಿವರಣೆಗಳಂತೆ ಸುಮಾರು 40ರಿಂದ 45 ದಿನಗಳ ಅವಧಿಯಲ್ಲಿ ಭ್ರೂಣದ ಲಿಂಗವು ನಿರ್ಧಾರವಾಗುತ್ತದೆ. ಮೇಲ್ನೋಟಕ್ಕೆ ಪರಸ್ಪರ ವಿರುದ್ಧವಾಗಿರುವಂತೆ ಕಂಡು ಬರುವ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿರುವ ವಿವರಣೆಗಳನ್ನು, ಹದೀಸ್‌ಗಳ ಮಹತ್ವವನ್ನು ಕಡೆಗಣಿಸಲು ಪ್ರಯತ್ನಿಸುತ್ತಿರುವ, ಮುಸ್ಲಿಮರಲ್ಲೇ ತಲೆಯೆತ್ತಿರುವ ಒಂದು ಪಂಗಡವು ತಮ್ಮ ವಾದ ಸಮರ್ಥನೆಗೆ ಆಯುಧವಾಗಿ ಬಳಸಿದರೆ, ವಿಜ್ಞಾನವನ್ನೇ ಸರ್ವಸ್ವವೆಂದು ಬಗೆದಿದ್ದ ಓರಿಯಂಟಲಿಸ್ಟ್‌ಗಳ ಒಂದು ಗುಂಪು ಪ್ರವಾದಿ ವಚನಗಳಲ್ಲಿರುವ ಈ ಉಲ್ಲೇಖಗಳನ್ನು ಗೇಲಿ ಮಾಡಿದ್ದವು. ಆದರೆ ಅಲ್‌ಹಮ್ದುಲಿಲ್ಲಾಹ್ ಇದೀಗ ಪ್ರವಾದಿ(ﷺ)ರವರ ವಚನಗಳಲ್ಲಿರುವ ಉಲ್ಲೇಖಗಳನ್ನು ಕೂಡಾ ವೈಜ್ಞಾನಿಕ ಕ್ಷೇತ್ರವು ಅಂಗೀಕರಿಸುತ್ತದೆ.

## ಲಿಂಗ ನಿರ್ಧಾರದ ಕುರಿತು ಹೊಸ ವೈಜ್ಞಾನಿಕ ಸಂಶೋಧನೆಗಳು


ಭ್ರೂಣದ ಲಿಂಗವನ್ನು ನಿರ್ಧರಿಸುವ ವರ್ಣತಂತುಗಳು ಗರ್ಭಧಾರಣೆಯ ಸಮಯದಲ್ಲೇ ಲಿಂಗವನ್ನು ನಿರ್ಧರಿಸುತ್ತವೆಯಾದರೂ ಈ ನಿರ್ಧಾರವು ನಿರ್ಣಾಯಕವಾಗಿ ಗೋಚರವಾಗುವುದು ಸುಮಾರು 42ನೆ ದಿನದಲ್ಲಾಗಿದೆ. ಪೂರ್ವ ನಿರ್ಧರಿತ ಲಿಂಗದ ಜನನ ಗ್ರಂಥಿಗಳ ಬೆಳವಣಿಗೆಯನ್ನು 42ನೇ ದಿನದಲ್ಲಿ ಕ್ರಿಯಾಶೀಲಗೊಳಿಸುವುದು ವೈ ವರ್ಣತಂತುವಿನಲ್ಲಿ ಉಪಸ್ಥಿತವಿರುವ ಎಸ್ ಆರ್ ವೈ (SRY) ಎಂಬ ಜೀನ್ ಆಗಿದೆ.



ಮೇಲಿನ ಚಿತ್ರದಲ್ಲಿರುವುದು ಭ್ರೂಣದ ಎರಡು ಪ್ರದೇಶಗಳಲ್ಲಿರುವ ಜನನ ಗ್ರಂಥಿ(Gonads)ಗಳಾಗಿವೆ. ಇವು ಗಂಡು ಮತ್ತು ಹೆಣ್ಣು ಭ್ರೂಣದಲ್ಲಿ ಆರನೇ


ವಾರದ ತನಕ ಒಂದೇ ರೀತಿಯಾಗಿರುತ್ತವೆ. ಆರನೇ ವಾರದಲ್ಲಿ ಇವು ಒಂದೋ ವೃಷಣ (Testes)ಗಳಾಗಿ ಅಥವಾ ಅಂಡಾಶಯ (Ovaries)ಗಳಾಗಿ ಮಾರ್ಪಡುತ್ತವೆ. ಈ ರೀತಿ ಭ್ರೂಣದ ಲಿಂಗವು ಬೆಳವಣಿಗೆ ಹೊಂದಲು ಆರಂಭಿಸಿ ಮುಂದಿನ ಕೆಲವೇ ವಾರಗಳಲ್ಲಿ ಗೋಚರಿಸತೊಡಗುತ್ತದೆ.

## ಭ್ರೂಣ ಬೆಳವಣಿಗೆ – ಮೂರನೇ ವಾರದಲ್ಲಿ:





ಭ್ರೂಣಕ್ಕೆ ಮೂರು ವಾರಗಳು ತುಂಬುವಾಗ ಅದು ಸರಿಸುಮಾರು ಒಂದು ಇಂಚಿನ ಎಂಟನೆ ಒಂದು ಭಾಗದಷ್ಟು (⅛ inch) ದೊಡ್ಡದಾದರೆ ನಾಲ್ಕನೇ ವಾರದಲ್ಲಿ ನಾಲ್ಕನೇ ಒಂದು ಇಂಚಿ(¼ inch)ನಷ್ಟಾಗಿರುತ್ತದೆ. ಈ ಹಂತದಲ್ಲಿ ಭ್ರೂಣದ ಲಿಂಗೋತ್ಪತ್ತಿ ಅಂಗ(sex-producing organs)ವಾಗಿ ಬೆಳೆಯುವ ಜನನ ಗ್ರಂಥಿಗಳ (Gonads) ಕುರಿತು ಯಾವುದೇ ಕುರುಹುಗಳೂ ದೊರೆಯುವುದಿಲ್ಲ.

## ಭ್ರೂಣ ಬೆಳವಣಿಗೆ – ಐದನೇ ವಾರದಲ್ಲಿ:




ಬೆಳವಣಿಗೆಯಾಗುತ್ತಿರುವ ಕಿಡ್ನಿಗಳ ಪಕ್ಕದಲ್ಲಿ ಜನನಾಂಗದ ದಿಬ್ಬುಗಳು (Genital Ridges) ರೂಪುಗೊಳ್ಳಲು ಆರಂಭವಾಗುತ್ತವೆ. ಜನನ ಗ್ರಂಥಿಗಳು (Gonads) ಎಂದೂ ಕರೆಯಲಾಗುವ ಈ ದಿಬ್ಬಗಳು ತರುವಾಯ ವೃಷಣಗಳಾಗಿ ಅಥವಾ ಅಂಡಾಶಯಗಳಾಗಿ ಪರಿವರ್ತನೆಗೊಳ್ಳುತ್ತವೆ.
ಈ ಸಮಯದಲ್ಲಿ ಮತ್ತು ಇಲ್ಲಿಂದ ಏಳನೇ ವಾರದ ತನಕ ಈ ಜನನಾಂಗದ ದಿಬ್ಬುಗಳು ಗಂಡು ಭ್ರೂಣದಲ್ಲೂ ಹೆಣ್ಣು ಭ್ರೂಣದಲ್ಲೂ ಏಕರೂಪವಾಗಿರುತ್ತವೆ. ಆದ್ದರಿಂದ ಈ ಹಂತದಲ್ಲಿ ಭ್ರೂಣದ ಲಿಂಗ ಯಾವುದೆಂದು ನಿರ್ಧರಿಸಲು ನಮಗೆ ಸಾಧ್ಯವಾಗುವುದಿಲ್ಲ.

## ಭ್ರೂಣ ಬೆಳವಣಿಗೆ – ಆರನೇ ವಾರದಲ್ಲಿ:




ಆದಿ ಜೀವಾಣುಕೋಶಗಳು (Primitive Germ Cells) ಭ್ರೂಣದ ಲೋಳೆ ಚೀಲ (Yolk Sac)ದಿಂದ ಜನನಾಂಗದ ದಿಬ್ಬುಗಳೆಡೆಗೆ ವಲಸೆ ಹೋಗುತ್ತವೆ. ಇವು ತರುವಾಯ ಒಂದೋ ವೀರ್ಯ ಕೋಶಗಳಾಗಿ ಅಥವಾ ಅಂಡಕೋಶಗಳಾಗಿ ಮಾರ್ಪಡುತ್ತವೆ.
ಈ ಸಮಯದಲ್ಲಿ ಕೂಡ ಗಂಡು ಮತ್ತು ಹೆಣ್ಣು ಜನನ ಗ್ರಂಥಿಗಳು ಏಕರೂಪವಾಗಿಯೇ ಗೋಚರವಾಗುತ್ತವೆ.

## ಭ್ರೂಣ ಬೆಳವಣಿಗೆ – ಆರನೇ ವಾರದ ಉತ್ತರಾರ್ಧದಲ್ಲಿ:




ಆರನೇ ವಾರದ ಉತ್ತರಾರ್ಧದಲ್ಲಿ, ಅಂದರೆ 40–42ನೇ ದಿನಗಳಲ್ಲಿ, ಭ್ರೂಣವು ಗಂಡಾಗಿ ಅಭಿವೃದ್ಧಿ ಹೊಂದಲಿದೆಯೋ ಅಥವಾ ಹೆಣ್ಣಾಗಿ ಅಭಿವೃದ್ಧಿ ಹೊಂದಲಿದೆಯೋ ಎಂಬುದನ್ನು ನಿರ್ಧರಿಸುವ ನಿರ್ಣಾಯಕ ಘಟನೆಯು (Crucial Event) ಜರಗುತ್ತದೆ.

ಭ್ರೂಣದ ಕೋಶಗಳಲ್ಲಿ ಉಪಸ್ಥಿತವಾಗಿರುವುದು ದೋಷಪೂರಿತವಲ್ಲದ ವೈ ವರ್ಣತಂತುವಾಗಿದ್ದರೆ ಅದರಲ್ಲಿ ಉಪಸ್ಥಿತವಿರುವ SRY ಜೀನ್ ಚಾಲನೆಗೊಂಡು ಇತರ ಜೀನ್‌ಗಳನ್ನು ಚಾಲನೆಗೊಳಿಸುವ ಮತ್ತು ಗಂಡು ಹಾರ್ಮೋನ್ (Male Hormone)ಗಳನ್ನು ಉದ್ದೀಪಿಸುವ ರಾಸಾಯನಿಕ ಸರಣಿ ಕ್ರಿಯೆ (Chemical Chain Reaction) ಯನ್ನು ಪ್ರಾರಂಭಿಸುತ್ತದೆ.

ಆದರೆ ಭ್ರೂಣದ ಕೋಶದಲ್ಲಿ ಉಪಸ್ಥಿತವಾಗಿರುವುದು (x) ವರ್ಣತಂತುವಾಗಿದ್ದರೆ ಭ್ರೂಣವು ಹೆಣ್ಣಾಗಿ ಅಭಿವೃದ್ಧಿ ಹೊಂದುತ್ತದೆ.

SRY ಎಂದರೆ ವೈ ವರ್ಣತಂತುವಿನ ಲಿಂಗವನ್ನು ನಿರ್ಧರಿಸುವ ಭಾಗ (sex-determining region of the Y chromosome) ಎಂದರ್ಥ.

ಈ ಜೀನ್‌ನ ಬಗ್ಗೆ ಸಂಶೋಧನೆಗಳು ಇನ್ನೂ ನಡೆಯುತ್ತಿವೆಯಾದ್ದರಿಂದ ಎಕ್ಸ್ ವರ್ಣತಂತುವಿನಲ್ಲಿ ಉಪಸ್ಥಿತವಿದ್ದು ಸಂಬಂಧಿತ ಸ್ತ್ರೀ ಹಾರ್ಮೋನುಗಳನ್ನು ಉದ್ದೀಪಿಸುವ ಭಾಗ ಯಾವುದು ಎಂಬಿತ್ಯಾದಿಗಳ ಬಗ್ಗೆ ಪೂರ್ಣವಾಗಿ ಏನಾದರೂ ಹೇಳಿ ಬಿಡಲು ಈಗ ಸಾಧ್ಯವಿಲ್ಲ. ಇವುಗಳು ಏನೇ ಆಗಿದ್ದರೂ ಭ್ರೂಣದ ಜನನಾಂಗಗಳು ತಮ್ಮ ಬೆಳವಣಿಗೆ ಆರಂಭಿಸುವುದು ಆರನೇ ವಾರದ ಉತ್ತರಾರ್ಧದಲ್ಲಾಗಿದೆ. ಅರ್ಥಾತ್ ಸುಮಾರು 42ನೇ ದಿನದಲ್ಲಾಗಿದೆ.

## ಭ್ರೂಣದ ಲಿಂಗ ನಿರ್ಧಾರದ ಕುರಿತು ಹದೀಸ್‌ಗಳು ಏನೆನ್ನುತ್ತವೆ?

ಅಲ್‌ಬುಖಾರಿ ಮತ್ತು ಮುಸ್ಲಿಮ್ ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ﷺ)ರಿಂದ ಉದ್ಧರಿಸಿದ **'ಅಸ್ಸಾದಿಕುಲ್ ಮಸ್ದೂಕ್'** ಎಂಬ ಹೆಸರಲ್ಲಿ ಪ್ರಸಿದ್ಧವಾಗಿರುವ ಹದೀಸೊಂದರಲ್ಲಿ ಪ್ರವಾದಿ(ﷺ)ರವರು ಹೇಳಿದರು:

**"ನಿಮ್ಮಲ್ಲೊಬ್ಬನ ಸೃಷ್ಟಿಯನ್ನು ಅವನ ಮಾತೆಯ ಉದರದಲ್ಲಿ 40 ದಿನಗಳಲ್ಲಿ ಜೋಡಿಸಲಾಗುವುದು. ಮಾತ್ರವಲ್ಲದೇ ಅಷ್ಟೇ ಸಮಯದ ತನಕ ಅವನು ಅಲಕ ಆಗಿರುವನು. ಮಾತ್ರವಲ್ಲದೇ ಅಷ್ಟೇ ಸಮಯದ ತನಕ ಅವನು ಮುದ್ಘಃ ಆಗಿರುವನು. ತರುವಾಯ ಅಲ್ಲಾಹು ಒಬ್ಬ ಮಲಕನ್ನು ನಿಯೋಗಿಸಿ ನಾಲ್ಕು ವಿಷಯಗಳನ್ನು ದಾಖಲಿಸುವನು. ಅವನ ಅನ್ನಾಧಾರ, ಅವನ ಆಯುಸ್ಸು, ಅವನ ಸೌಭಾಗ್ಯವಂತಿಕೆ ಅಥವಾ ಅವನ ದೌರ್ಭಾಗ್ಯವಂತಿಕೆ..."**

ಮುಸ್ಲಿಮ್ ಉದ್ಧರಿಸಿದ ಇನ್ನೊಂದು ವರದಿಯಲ್ಲಿ ಹೀಗಿದೆ:

**"40 ಅಥವಾ 45 ದಿನಗಳಲ್ಲಿ ಭ್ರೂಣವು ಗರ್ಭದೊಳಗೆ ನುತ್ಫಃದ ಹಂತದಲ್ಲಿರುವಾಗ ಒಬ್ಬ ಮಲಕ್ ಗರ್ಭಾಶಯವನ್ನು ಪ್ರವೇಶಿಸುವುದು. ಆ ಮಲಕ್ ಕೇಳುವುದು: ಓ ನನ್ನ ಪ್ರಭೂ! ಇದು ಭಾಗ್ಯವಂತನೋ ಅಥವಾ ಭಾಗ್ಯಹೀನನೋ? ತರುವಾಯ ಅದರ ಭಾಗ್ಯವನ್ನು ದಾಖಲಿಸಲಾಗುವುದು. ಆ ಮಲಕ್ ಕೇಳುವುದು: ಓ ನನ್ನ ಪ್ರಭೂ! ಇದು ಗಂಡೋ ಅಥವಾ ಹೆಣ್ಣೋ? ತರುವಾಯ ಅದರ ಲಿಂಗವನ್ನು ದಾಖಲಿಸಲಾಗುವುದು. ತರುವಾಯ ಅದರ ಕರ್ಮ, ಆಯುಸ್ಸು, ಅನ್ನಾಧಾರ ಇತ್ಯಾದಿಗಳನ್ನು ದಾಖಲಿಸಲಾಗುವುದು..."**

ಮುಸ್ಲಿಮ್ ಉದ್ಧರಿಸಿದ ಇನ್ನೊಂದು ವರದಿಯಲ್ಲಿ ಹೀಗಿದೆ:

**"ಭ್ರೂಣವು ನುತ್ಫದ ಹಂತದಲ್ಲಿದ್ದು 42 ದಿನಗಳಾಗುವಾಗ ಅಲ್ಲಾಹು ಅದರೆಡೆಗೆ ಒಬ್ಬ ಮಲಕನ್ನು ನಿಯೋಗಿಸುವನು. ಅದು ಭ್ರೂಣಕ್ಕೆ ರೂಪವನ್ನು ನೀಡಿ ಅದಕ್ಕೆ ಕಿವಿ, ಕಣ್ಣು, ಚರ್ಮ ಮತ್ತು ಮಾಂಸ ಮತ್ತು ಮೂಳೆಗಳನ್ನು ಸೃಷ್ಟಿಸುವುದು. ಮಾತ್ರವಲ್ಲದೇ ಅದು ಕೇಳುವುದು: ಓ ನನ್ನ ಪ್ರಭೂ! ಇದು ಗಂಡೋ ಅಥವಾ ಹೆಣ್ಣೋ? ಆಗ ಅಲ್ಲಾಹು ನಿರ್ಧರಿಸುವ ಲಿಂಗವನ್ನು ದಾಖಲಿಸಲಾಗುವುದು..."**

ಅನಸ್ ಇಬ್ನ್ ಮಾಲಿಕ್(ﷺ)ರಿಂದ ಇಮಾಮ್ ಅಲ್‌ಬುಖಾರಿ ಮತ್ತು ಮುಸ್ಲಿಮ್ ವರದಿ ಮಾಡಿದ ಹದೀಸೊಂದರಲ್ಲಿ ಪ್ರವಾದಿ(ﷺ)ರವರು ಹೇಳಿದರು:

**“ಖಂಡಿತವಾಗಿಯೂ ಅಲ್ಲಾಹು ಗರ್ಭದ ಹೊಣೆಯನ್ನು ಒಬ್ಬ ಮಲಕ್‌ಗೆ ವಹಿಸಿಕೊಟ್ಟಿರುವನು. ಆ ಮಲಕ್ ಹೀಗನ್ನುತ್ತಿರುವುದು: ಓ ನನ್ನ ಪ್ರಭೂ! ನುತ್ಫಃ ಆಗಿದೆ. ಓ ನನ್ನ ಪ್ರಭೂ! ಅಲಕಃ ಆಗಿದೆ. ಓ ನನ್ನ ಪ್ರಭೂ! ಮುದ್ಘಃ ಆಗಿದೆ. ಆ ಶಿಶುವಿನ ಸೃಷ್ಟಿಯನ್ನು ನಿರ್ಧರಿಸುವ ಸಮಯ ಬಂದಾಗ ಆ ಮಲಕ್ ಕೇಳುವುದು: ಇದು ಗಂಡೋ ಅಥವಾ ಹೆಣ್ಣೋ? ಭಾಗ್ಯವಂತನೋ ಅಥವಾ ಭಾಗ್ಯಹೀನನೋ? ಈ ಶಿಶುವಿನ ಅನ್ನಾಧಾರ ಮತ್ತು ಆಯುಸ್ಸು ಎಷ್ಟು? ಹೀಗೆ ಎಲ್ಲವನ್ನೂ ಆ ಶಿಶು ತಾಯಿಯ ಗರ್ಭದಲ್ಲಿರುವಾಗಲೇ ಬರೆದಿಡಲಾಗುವುದು.”**

### ಮೇಲಿನ ಹದೀಸುಗಳ ತಾತ್ಪರ್ಯವನ್ನು ಹೀಗೆ ಸಂಗ್ರಹಿಸಬಹುದು:

1. ನುತ್ಫಃದ ಹಂತದಲ್ಲಿ ಭ್ರೂಣದ ಲಿಂಗದ ಬಗ್ಗೆಯಿರುವ ಪೂರ್ವ ನಿರ್ಧಾರವನ್ನು ಮಲಕ್ ಆ ಭ್ರೂಣದ ವಿಧಿಯಲ್ಲಿ ದಾಖಲುಗೊಳಿಸುತ್ತದೆ. ನುತ್ಫಃದ ಈ ಹಂತವು 40ರಿಂದ 45 ದಿನಗಳನ್ನು ಹೊಂದಿರುತ್ತದೆ. ಲಿಂಗವು ದಾಖಲಿಸಲ್ಪಡುವುದು 40ನೇ ದಿನದಲ್ಲಿ ಎಂದು ಒಂದು ಹದೀಸಿನಲ್ಲಿ ಹೇಳಲಾದರೆ 40ರಿಂದ 45 ದಿನಗಳು ಎಂದು ಇನ್ನೊಂದು ಹದೀಸಿನಲ್ಲಿ ಹೇಳಲಾಗಿದೆ. ಆದರೆ ಮತ್ತೊಂದು ಹದೀಸಿನಲ್ಲಿ 42ನೇ ದಿನವೆಂದು ಖಚಿತವಾಗಿ ಹೇಳಲಾಗಿದೆ. ಏನೇ ಆದರೂ ಲಿಂಗವು ದಾಖಲಿಸಲ್ಪಡುವುದು 6ನೇ ವಾರದ ಉತ್ತರಾರ್ಧದಲ್ಲಿ ಎಂದು ಇದರಿಂದ ತಿಳಿದು ಬರುತ್ತದೆ.
2. 40 ದಿನಗಳಲ್ಲಿ ಮನುಷ್ಯನ ಸೃಷ್ಟಿಯನ್ನು ಜೋಡಿಸಲಾಗುವುದು. ಅಂದರೆ ವೀರ್ಯ ಕೋಶವು ಅಂಡಕೋಶವನ್ನು ಪ್ರವೇಶಿಸಿ ಭ್ರೂಣವಾಗಿ 40 ದಿನಗಳೊಳಗೆ ಬೆಳವಣಿಗೆ ಹೊಂದುವುದು.
3. ಭ್ರೂಣವು ನುತ್ಫಃದ ಕೊನೆಯ ಹಂತದಲ್ಲಿರುವಾಗ ಅಂದರೆ 40–45 ದಿನಗಳೊಳಗೆ ಅಲ್ಲಾಹು ಒಬ್ಬ ಮಲಕನ್ನು ನಿಯೋಗಿಸುವನು. ಅಲ್ಲಿಯ ತನಕ ಅಲ್ಲಾಹು ಮಾತ್ರ ಅರಿತಿದ್ದ ಆ ಭ್ರೂಣದ ಲಿಂಗವನ್ನು ಅಲ್ಲಾಹನ ಅಪ್ಪಣೆಯ ಮೇರೆಗೆ ಆ ಮಲಕ್ ದಾಖಲಿಸುವುದು. ಮಾತ್ರವಲ್ಲದೇ ಆ ಭ್ರೂಣದ ಜೀವನಾಧಾರ, ಆಯುಷ್ಯ, ಅದರ ಭಾಗ್ಯ ನಿರ್ಭಾಗ್ಯ ಇತ್ಯಾದಿಗಳನ್ನು ಆ ಮಲಕ್ ದಾಖಲಿಸುವುದು.

ಪ್ರಸ್ತುತ ಪ್ರವಾದಿವಚನವು ವಿಜ್ಞಾನಕ್ಕೆ ವಿರುದ್ಧವಾಗಿದೆಯೆಂದು ಒಂದು ಕಾಲದಲ್ಲಿ ಕೆಲವರು ವಾದಿಸುತ್ತಿದ್ದಾಗ, ಪ್ರವಾದಿವಚನಗಳು ಇಸ್ಲಾಮಿನಲ್ಲಿ ಪ್ರಮಾಣವಲ್ಲವೆಂದು

ಹೇಳುತ್ತಾ ಇನ್ನೊಂದು ವರ್ಗವು ಇದೇ ವಚನವನ್ನು ಉದಾಹರಣೆಯಾಗಿ ಬಳಸಿಕೊಂಡಿತ್ತು. ಆದರೆ ಇವರೆಲ್ಲರ ವಾದವನ್ನು ತಿರಸ್ಕರಿಸಿರುವ ವೈಜ್ಞಾನಿಕ ಕ್ಷೇತ್ರವು ಇಂದು ಪ್ರವಾದಿ(ﷺ)ರವರ ವಚನದ ಸತ್ಯತೆಯನ್ನು ಸ್ವೀಕರಿಸಿಕೊಂಡಿದೆ. ತನ್ನನ್ನು ಪ್ರವಾದಿಯೆಂದು ವಾದಿಸಿಕೊಂಡ 1400 ವರ್ಷಗಳ ಹಿಂದಿನ ಅನಕ್ಷರಸ್ಥ ವ್ಯಕ್ತಿಯೊಬ್ಬರು ಇದನ್ನೆಲ್ಲ ಕಲಿಸಿಕೊಟ್ಟಿದ್ದರು ಎಂದಿರುವಾಗ ಅವರು ಅಲ್ಲಾಹನ ಪ್ರವಾದಿ ಎಂಬುದಕ್ಕೆ ಪುರಾವೆಯಾಗಿ ಇದೊಂದೇ ಸಾಲದೇ?

﴿وَمَا يَنْطِقُ عَنِ الْهَوَى * إِنْ هُوَ إِلَّا وَحْيٌ يُوحَى﴾

**“ಅವರು (ಮುಹಮ್ಮದ್) ತನ್ನಿಚ್ಛೆಯಂತೆ ಮಾತನಾಡುವುದಿಲ್ಲ. ಅದೊಂದು ದಿವ್ಯವಾಣಿಯ ಹೊರತು ಇನ್ನೇನೂ ಅಲ್ಲ.” (ಕುರ್‌ಆನ್ 53/3–4)**

(6ನೇ ವಾರದ ಉತ್ತರಾರ್ಧದಲ್ಲಿ ಅಂದರೆ ಸುಮಾರು 42ನೇ ದಿನದಲ್ಲಿ ಜರಗುವ ಈ ಅದ್ಭುತ ಪ್ರಕ್ರಿಯೆಯನ್ನು ನೋವಾ ಆನ್‌ಲೈನ್ ವೆಬ್‌ಸೈಟ್ ‘ಜೀವನದ ಅತೀ ದೊಡ್ಡ ಪವಾಡಗಳು’ ಎಂಬ ವಿಭಾಗದಲ್ಲಿ ಸೇರಿಸಿ ಪ್ರಕಟಿಸಿದೆ)

ಹೆಚ್ಚಿನ ಮಾಹಿತಿಗಾಗಿ ಸಂದರ್ಶಿಸಿರಿ:

http://www.pbs.org/wgbh/nova/miracle/determined.html

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********